## 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ)

### ಎಸ್ ಸಿ ಸಂಖ್ಯೆ: 5020/2024

ಪಿರ್ಯಾದುದಾರರು    ಕೆ ಆರ್ ಪೇಟೆ ಟೌನ್ ಪೊಲೀಸ್ ಠಾಣೆ

- ವಿರುದ್ದ -

ಆರೋಪಿ    ಮಂಜುನಾಥ ಜಿ ಆರ್ ಉಃ ಮಂಜ ಉಃ ಮಂಜು

### ದೋಷಾರೋಪಣೆ

ಶ್ರೀ ಗೋಪಾಲಕೃಷ್ಣ ರೈ ಟಿ. ಬಿ.ಎ. ಎಲ್‌ಎಲ್.ಬಿ., 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿಗಳಾದ

ಮಂಜುನಾಥ ಜಿ ಆರ್ ಉಃ ಮಂಜ ಉಃ ಮಂಜು
ಬಿನ್ ರಾಮಕೃಷ್ಣ
ವಯಸ್ಸು: 23 ವರ್ಷಗಳು,
ವಾಸಃ ಹುರುಳಿಗಂಗನಹಳ್ಳಿ ಗ್ರಾಮ
ಕಸಬಾ ಹೋಬಳಿ
ಕೆ ಆರ್ ಪೇಟೆ ತಾಲ್ಲೂಕು.

ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ರಚಿಸಿರುತ್ತೇನೆ.

- - -

ದಿನಾಂಕಃ 09.09.2017 ರಂದು ಬೆಳಿಗ್ಗೆ 10.00 ಗಂಟೆಯಲ್ಲಿ ಆರೋಪಿಯಾದ ನೀನು ಕೆ ಆರ್ ಪೇಟೆ ಟೌನ್ ಪೊಲೀಸ್ ಠಾಣಾ ಸಹಹದ್ದಿಗೆ ಸೇರಿದ ಸುಬ್ಬೇಗೌಡರ ಮಾಡ್ರನ್ ರೈಸ್‌ಮಿಲ್ ಮುಂದಿನ ಕೆ ಆರ್ ಪೇಟೆ-ಕೈಗೋನಹಳ್ಳಿ ರಸ್ತೆಯಲ್ಲಿ ಕೈಗೋನಹಳ್ಳಿ ಗ್ರಾಮದ ಸಾಕ್ಷಿ 1 ಮಂಜೇಗೌಡ ಮತ್ತು ಸಾಕ್ಷಿ 11 ಪುಟ್ಟಮ್ಮ ರವರ ಅಪ್ರಾಪ್ತ ಮಗಳಾದ ಮಾಲಾಶ್ರಿಯನ್ನು ಪುಸಲಾಯಿಸಿ ನಿನ್ನ ಬೈಕ್ ನಲ್ಲಿ ಕೂರಿಸಿಕೊಂಡು ಮೇಲುಕೋಟೆ ರಸ್ತೆಯಲ್ಲಿರುವ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಆಕೆಯ ಮೇಲೆ

ಅತ್ಯಾಚಾರವೆಸಗಿದ್ದ ಕುರಿತು ಆರೋಪಿಯಾದ ನಿನ್ನ ವಿರುದ್ಧ ಪ್ರಕರಣ ದಾಖಲಾಗಿದ್ದರಿಂದ ನೀನು ತಲೆಮರೆಸಿಕೊಂಡಿದ್ದೆ,

ನಂತರ ದಿನಾಂಕಃ 05.12.2017 ರ ಹಿಂದಿನ ದಿನಗಳಲ್ಲಿ ಆರೋಪಿಯಾದ ನೀನು ಕದ್ದುಮುಚ್ಚಿ ಊರಿಗೆ ಬಂದು ಹೋಗುತ್ತಿದ್ದು ಆ ಸಮಯದಲ್ಲಿ ಸಾಕ್ಷಿ 2 ರಿಂದ 5 ರವರನ್ನು ಉದ್ದೇಶಿಸಿ ನೀವು ರೇಪ್ ಕೇಸಿನಲ್ಲಿ ಸಾಕ್ಷಿ ಇದ್ದೀರಾ, ಸದರಿ ರೇಪ್ ಕೇಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ಮಂಜೇಗೌಡ ಮತ್ತು ಮಾಲಾಶ್ರೀಗೆ ಹೇಳಿ, ಅವರು ರಾಜಿ ಮಾಡಿಕೊಳ್ಳದಿದ್ದರೆ ನಾನು ಜೈಲಿಗೆ ಹೋಗುತ್ತೇನೆ, ಜೈಲಿನಿಂದ ರಿಲೀಸ್ ಆದ ಮೇಲೆ ನಾನು ಅವಳನ್ನು ಬಿಡುವುದಿಲ್ಲ, ಮಾಲಾಶ್ರೀ ಬದುಕಿದ್ದು ಏನು ಪ್ರಯೋಜನ, ಅವಳನ್ನು ಯಾರೂ ಮದುವೆಯಾಗುವುದಿಲ್ಲ, ಆಕೆ ಬದುಕಿರುವುದಕ್ಕಿಂತ ಸಾಯುವುದೇ ಒಳ್ಳೆಯದು, ಎಂದು ಹೇಳಿ ಸಾಕ್ಷಿ 2 ರಿಂದ 5 ರವರ ಮುಖಾಂತರ ಮಾಲಾಶ್ರೀ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಚೋದನೆ ನೀಡಿದ್ದು ಮತ್ತು 1 ನೇ ಆರೋಪಿಯಾದ ನೀನು ಅತ್ಯಾಚಾರ ಮಾಡಿದ್ದ ವಿಚಾರದಲ್ಲಿ ನಿನ್ನ ವಿರುದ್ಧ ಮಾಲಶ್ರೀಯು ಹಾಕಿದ್ದ ಕೇಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ತನಗೆ ಮತ್ತು ತನ್ನ ಮನೆಯವರಿಗೆ ಒತ್ತಡ ಹಾಕುತ್ತಿದ್ದುದರಿಂದ ಮಾಲಾಶ್ರೀಯು ಮಾನಸಿಕವಾಗಿ ಮನನೊಂದು ದಿನಾಂಕಃ 05.12.2017 ರಂದು ಕೆ ಆರ್ ಪೇಟೆ ಟೌನ್ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೈಗೋನಹಳ್ಳಿಯಲ್ಲಿರುವ ಶನಿ ದೇವರ ದೇವಸ್ಥಾನದ ಮುಂದಿನ ನೀರಿನ ಕೊಳಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಆ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 306 ರ ರೀತ್ಯಾ ಶಿಕ್ಷಾರ್ಹ ಅಪರಾದವೆಸಗಿರುತ್ತಿ.

ಆರೋಪಿಯಾದ ನೀನು ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಗೋಪಾಲಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).

**3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ)**

**ಎಸ್ ಸಿ ಸಂಖ್ಯೆ: 5020/2024**

ಪಿರ್ಯಾದುದಾರರು ಕೆ ಆರ್ ಪೇಟೆ ಟೌನ್ ಪೊಲೀಸ್ ಠಾಣೆ

- ವಿರುದ್ದ -

ಆರೋಪಿ ಮಂಜುನಾಥ ಜಿ ಆರ್ ಉಃ
ಮಂಜ ಉಃ ಮಂಜು

**ದೋಷಾರೋಪಣೆ ಆರೋಪಿ ನೀಡಿದ ಉತ್ತರ**

1. ಕನ್ನಡ ಬಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆಯ ಅಂಶಗಳು ನಿಮಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು.

2. ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

ಈ ಪ್ರಕರಣದ ದೋಷಾರೊಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಪಡೆದುಕೊಳ್ಳಲಾಯಿತು.

(ಗೋಪಾಲಕೃಷ್ಣ ರೈ ಟಿ.)
3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

ಆರೋಪಿಯ ಸಹಿ